ಶ್ರೀ ಎಂ. ಚಂದ್ರಶೇಖರ್.—ವಿಚಾರಣೆ ಎಂದರೆ ಈಗ ಮಾಡಿರುವುದು ಕಾನೂನು ಬದ್ಧವಾಗಿ ಮಾಡಿರುತ್ತಾರೆಯೇ ಇಲ್ಲವೇ ಏನನ್ನುವುದನ್ನು ವಿಚಾರಣೆ ಮಾಡುವುದು. ಕಾನೂನು ಬದ್ಧವಾಗಿ ಮಾಡದಿದ್ದ ಪಕ್ಷದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ರಾಮಪ್ಪ.—ವಿಚಾರಣೆ ಮಾಡುವ ಸಂದರ್ಭದಲ್ಲಿ ನಿಮ್ಮ ನಿಮ್ಮಲ್ಲಿಯೇ ವಿಚಾರಣೆ ಮಾಡಿಕೊಳ್ಳುವುದು ಸರಿಯಲ್ಲ. ನಮ್ಮನ್ನೂ ಕರೆಯಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಆ ಕಡೆ ನೀವು ನಾವು ಹೋಗೋಣ.

MR. SPEAKER.—Hon'ble Minister may take him into confidence.

SRI M. CHANDRASEKHAR.—I have already taken.

ಮಂಗಳೂರಿನ ಉಳ್ಳಾಲ ಕ್ಷೇತ್ರದಲ್ಲಿ ಬರುವ ಕೆಲವು ನಗರಾಸ್ತಿಯ ಬಗ್ಗೆ

೧೨೬೪. ಶ್ರೀ ಇದಿನಬ್ಬ (ಉಳ್ಳಾಲ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉಳ್ಳಾಲ ಕ್ಷೇತ್ರದ ಕೆಲವು ಗ್ರಾಮಗಳಲ್ಲಿ, ಅರ್ಬನ್ ಸೀಲಿಂಗ್ ಕಾನೂನು ಜಾರಿಯಲ್ಲಿರುವುದು ನಿಜವೆ ?

ಆ) ಹಾಗಿದ್ದಲ್ಲಿ ಆ ಕಾನೂನಿನಂತೆ ಪ್ರತಿಯೊಬ್ಬರೂ ೦೪ ಸೆಂಟ್ಸ್ ಭೂಮಿಯನ್ನು ಮಾತ್ರ ಇಟ್ಟುಕೊಳ್ಳಬಹುದಲ್ಲವೇ.?

ಇ) ಹಾಗಿರುವಾಗ ಎಷ್ಟು ಜನರು ತಮ್ಮ ಜಮೀನುಗಳಿಗೆ ವಿನಾಯಿತಿ ಪಡೆದುಕೊಂಡಿದ್ದಾರೆ.

ಈ) ವಿನಾಯಿತಿ ಪಡೆದವರು ಜಮೀನು ಮಾರಾಟ ಮಾಡಬಹುದಲ್ಲವೇ ಆ ರೀತಿ ಮಾರಾಟ ಆಗಿರುವ ಸಂದರ್ಭಗಳಲ್ಲಿ ಸರ್ಕಾರದವರ ನಿಲುವೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಹೌದು

ಆ) ಹೌದು

ಇ) ಉಳ್ಳಾಲ ಕ್ಷೇತ್ರದಲ್ಲಿ ಬರುವ ನಗರಾಸ್ತಿ ಪ್ರದೇಶಕ್ಕೆ ಸಂಬಂಧಿಸಿರುವಂತೆ ೧೧೦ ಪ್ರಕರಣಗಳಲ್ಲಿ ವಿನಾಯಿತಿ ಪಡೆದುಕೊಂಡಿದ್ದಾರೆ,

ಈ) ಸರ್ಕಾರದ ಆದೇಶದಲ್ಲಿ ವಿನಾಯ್ತಿ ಹಾಗೂ ಮಾರಾಟ ಮಾಡಲು ಪರವಾನಗಿ ಕೊಟ್ಟಲ್ಲಿ ಸದರಿ ಜಮೀನನ್ನು ಮಾರಾಟ ಮಾಡಬಹುದಾಗಿದೆ. ಜಮೀನು ಒಡೆಯರು ಇಟ್ಟುಕೊಳ್ಳಲು ಮಾತ್ರ ವಿನಾಯ್ತಿ ನೀಡಿದ್ದಲ್ಲಿ ಮಾರಾಟ ಮಾಡುವ ಹಾಗಿಲ್ಲ. ಹಾಗೇನಾದರೂ ಸರ್ಕಾರ ಆದೇಶದ ಷರತ್ತುಗಳನ್ನು ಉಲ್ಲಂಘಿಸಿದ ಪಕ್ಷದಲ್ಲಿ ವಿನಾಯ್ತಿ ನೀಡಿರುವ ಆದೇಶವನ್ನು ಹಿಂತೆಗೆದುಕೊಂಡು ನಗರ ಭೂ ಪರಿಮಿತಿ ಕಾಯ್ದೆ, ೧೯೭೬ರ ಅನ್ವಯ ಆ ಜಮೀನನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ ಗ್ರಾಮಾಂತರ ಪ್ರದೇಶದ ಒಳಗಿನ ಪ್ರದೇಶಗಳಲ್ಲಿ ೪೯ ಸೆಂಟ್ಸ್ ಭೂಮಿಯನ್ನು ಇಟ್ಟುಕೊಳ್ಳಲು ಆಜ್ಞೆ ಇದ್ದರೂ ಸಹ ಶ್ರೀಮಂತರಿಗೆ ವಿನಾಯಿತಿಯನ್ನು ಏತಕ್ಕೆ ಕೊಟ್ಟಿರುತ್ತೀರಿ ? ಇದು ಪಕ್ಷಪಾತೀತವಲ್ಲವೆ?

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ ನಗರಪಾಲಿಕೆ ಪ್ರದೇಶಕ್ಕೆ ಇದು ಅನ್ವಯವಾಗುತ್ತದೆ ಬೆಂಗಳೂರಿನಲ್ಲಿ ೫೦ ಕಿಷ್ಟು ಎಂದು ಮಿತಿ ಇರುತ್ತದೆ. ಮಂಗಳೂರು ಪ್ರಾಧಿಕಾರ ಪ್ರದೇಶದ ಸಮೀಪದಲ್ಲಿ ಉಳ್ಳಾಲ ಬರುತ್ತದೆ. ೪೯ ಸೆಂಟ್ಸ್ ಅಂದರೆ ಸುಮಾರು ಎರಡು ಸಾವಿರ ಚದುರು ಮೀಟರ್‌ಗಳಷ್ಟು ಖಾಲಿ ನಿವೇಶನಗಳನ್ನು ಇಟುಕೊಳ್ಳಬಹುದು. ಮನೆ

ಸುತ್ತಮುತ್ತಲೂ ಇರತಕ್ಕ ಖಾಲಿ ಪ್ರದೇಶವಲ್ಲದೆ ಖಾಲಿ ನಿವೇಶನ ಸುಮಾರು ಎರಡು ಸಾವಿರ ಚದರ ಮೀಟರ್ ಇಟ್ಟುಕೊಳ್ಳಬಹುದೆಂದು ಕೇಂದ್ರ ಸರ್ಕಾರದ ಒಂದು ಕಾಯಿದೆ ಇರುತ್ತದೆ, ಆದರ ಪ್ರಕಾರವಾಗಿಯೇ ನಾವು ಕೂಡ ಕಾಯಿದೆಯನ್ನು ಮಾಡಿದ್ದೇವೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ ಸನ್ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಸರ್ಕಾರದ ಆದೇಶದಲ್ಲಿ ಮೀನಾಯ್ತು ಹಾಗೂ ಮಾರಾಟ ಮಾಡಲು ಪರವಾನಿಗೆ ಕೊಟ್ಟಲ್ಲಿ ಸದರಿ ಜಮೀನನ್ನು ಮಾರಾಟ ಮಾಡಬಹುದಾಗಿದೆ, ಜಮೀನು ಒಡೆಯರು ಇಟ್ಟುಕೊಳ್ಳಲು ಮಾತ್ರ ಮೀನಾಯ್ತು ನೀಡಿದ್ದಲ್ಲಿ ಮಾರಾಟ ಮಾಡುವ ಹಾಗಿಲ್ಲ. ಹಾಗೇನಾದರೂ ಸರ್ಕಾರದ ಆದೇಶ ಷರತ್ತುಗಳನ್ನು ಅವರು ಉಲ್ಲಂಘಿಸಿದ ಪಕ್ಷದಲ್ಲಿ ಮೀನಾಯ್ತು ನೀಡಿರುವ ಆದೇಶವನ್ನು ಹಿಂತೆಗೆದುಕೊಂಡು ನಗರ ಭೂ ಪರಿಮಿತಿ ಕಾಯ್ದೆ, ೧೯೭೬ರ ಆನ್ವಯ ಆ ಜಮೀನನ್ನು ಸರ್ಕಾರದ ಪಕ್ಷಕ್ಕೆ ತೆಗೆದುಕೊಳ್ಳಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ. ಮೀನಾಯ್ತು ಪಡೆದವರು ಈ ರೀತಿ ಮಾರಾಟ ಮಾಡುತ್ತಿದ್ದಾರೆ. ಇದರ ಸತ್ಯಾಸತ್ಯತೆಯನ್ನು ಪರಿಶೀಲನೆ ಮಾಡಬೇಕೆಂದು ಕೇಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಆ ರೀತಿಯಾದ ಪ್ರಕರಣಗಳು ಯಾವುದಾದರೂ ಇದ್ದರೆ ಅದನ್ನು ಪರಿಶೀಲನೆ ಮಾಡುತ್ತೇನೆ. ಕಾನೂನು ಪ್ರಕಾರವಾಗಿ ಮಾರುವಂತೆಯೇ ಇಲ್ಲ. ಕೆಲವೊಂದು ಸಂದರ್ಭಗಳಲ್ಲಿ ಅಂದರೆ ಸಂಕಷ್ಟ ಪ್ರಕರಣಗಳಲ್ಲಿ ಅವರ ಉಪಯೋಗಕ್ಕಾಗಿ ಮಾರಾಟ ಮಾಡಿರುತ್ತಾರೆ. ಈಗ ಉಳ್ಳಾಳ ಕ್ಷೇತ್ರದಲ್ಲಿ ಮೀನಾಯ್ತು ಪಡೆದಿರುವ ೧೧೦ ಪ್ರಕರಣಗಳಲ್ಲಿ ೯೦ ಜನ ಮಾರುವಂತೆಯೇ ಇಲ್ಲ, ಕೃಷಿ ಕೈಗಾರಿಕೆಗಳಿಗೆ ಇದನ್ನು ಇಟ್ಟುಕೊಳ್ಳಬೇಕು. ಇದರಲ್ಲಿ ೨೦ ಜನ ಅವರ ಸಂಕಷ್ಟದ ಮೇಲೆ ಅನುಮತಿಯನ್ನು ಪಡೆದುಕೊಂಡಿದ್ದಾರೆ.

ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕಾಗಿ ನಿವೇಶನಗಳಿಗಾಗಿ ಅರ್ಜಿ ಸಲ್ಲಿಸಿರುವ ಬಗ್ಗೆ

೧೧೬೫. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕಾಗಿ ನಿವೇಶನಗಳಿಗಾಗಿ ಅರ್ಜಿಸಲ್ಲಿಸಿರುವವರ ಸಂಖ್ಯೆ ಎಷ್ಟು ?

ಆ) ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ ನಿವೇಶನಗಳಿಗಾಗಿ ವಶಪಡಿಸಿಕೊಂಡಿರುವ ಭೂ ವಿಸ್ತೀರ್ಣವೆಷ್ಟು ?

ಇ) ಯೋಲ್ಕಂಡ ಎಲ್ಲಾ ಅರ್ಜಿದಾರರಿಗೆ ನಿವೇಶನ ಒದಗಿಸಲು ಬೇಕಾಗುವಷ್ಟು ಭೂಮಿಯ ವಿಸ್ತೀರ್ಣವೆಷ್ಟು ?

ಈ) ಈ ಅರ್ಜಿದಾರರಿಂದ ಬಿ. ಡಿ. ಎ. ಈಗಾಗಲೇ ಪಡೆದ ಮುಂಗಡ ಹಣದ ಮೊತ್ತ ವೆಷ್ಟು ?

ಶ್ರೀ ಎಂ. ಪಿ. ಪ್ರಕಾಶ್ (ಬೆಂಗಳೂರು ಅಭಿವೃದ್ಧಿ, ವಾರ್ತಾ, ಮತ್ತು ಪ್ರವಾಸೋದ್ಯಮ ಸಚಿವರು).—

ಅ) ವಿವರಗಳು ಈ ಕೆಳಕಂಡಂತಿವೆ :—

ಡಿಸೆಂಬರ್ ೮೭ರ ಪ್ರಕಟಣೆ	—	೭೯೫೭
ಜನವರಿ ೮೭ರ ಪ್ರಕಟಣೆ	—	೭೭೩೪೭
ಏಪ್ರಿಲ್ ೮೭ರ ಪ್ರಕಟಣೆ	—	೫೯೪೨
ಜುಲೈ ೮೭ರ ಪ್ರಕಟಣೆ	—	೮೨೧೨೨